## ಸೆಲೆಬ್ರಿಟಿ

■ ಹನಿ

## ಸುಂದರಿ ಜೆ ಲೋ

‘ವಿಶ್ವದ ಅತ್ಯಂತ ಸುಂದರ ಮಹಿಳೆ’ ಎಂದು ಜೆನ್ನಿಫರ್ ಲೋಪೆಜ್‌ಳನ್ನು ‘ಪೀಪಲ್’ ಮ್ಯಾಗಸಿನ್ ಮೊನ್ನೆ ಆಯ್ಕೆ ಮಾಡಿದೆ. ಫ್ಯಾಶನ್ ಜಗತ್ತಿನ ಬಹುತೇಕ ಸುಂದರಿಯರೆಲ್ಲ ‘ಪೀಪಲ್’ ಆಯ್ಕೆಗಾಗಿ ಮುಗಿಬೀಳುವುದು ಸುಳ್ಳಲ್ಲ. ಹಾಲಿವುಡ್‌ನ ಹದಿಹರೆಯದ ಹುಡುಗಿಯರನ್ನೆಲ್ಲ ಪಕ್ಕಕ್ಕೆ ತಳ್ಳಿ, 42ರ ಅಂಚಿನಲ್ಲಿರುವ ಜೆ ಲೋ ಈ ಪ್ರತಿಷ್ಠಿತ ಪ್ರಶಸ್ತಿ ಗೆದ್ದಿರುವುದು ವಿಶೇಷವೇ ಸರಿ.

ಜೆ ಲೋ (ಬರ್ತ್‌ಡೇ 24-7-1969) ಖುಷಿ ಪಡುವ ಇನ್ನೊಂದು ಸುದ್ದಿಯೂ ಈ ವರ್ಷ ಆಕೆಯನ್ನು ಸ್ವಾಗತಿಸಿದೆ. ವರ್ಷದ ಆರಂಭದಲ್ಲೇ ಬಿಡುಗಡೆಯಾದ ಆಕೆಯ ಹೊಸ ಆಲ್ಬಂ ‘ಆನ್ ದಿ ಫ್ಲೋರ್’ ಮಾರಾಟದಲ್ಲಿ ದಾಖಲೆ ನಿರ್ಮಿಸಿ, ಟಾಪ್ ಟೆನ್‌ನಲ್ಲಿ ಚಾರ್ಟ್‌ಬಸ್ಟರ್ ಆಗಿದೆ. 2003ರಲ್ಲಿ ‘ಆಲ್ ಐ ಹ್ಯಾವ್’ ಎನ್ನುವ ಆಕೆಯ ಆಲ್ಬಂ ಹೀಗೆ ಭಾರೀ ಗಳಿಕೆ ನಿರ್ಮಿಸಿ ಹಾಟ್ ಫೇವರಿಟ್ ಆದ ಬಳಿಕ ಇನ್ನಾವ ಆಲ್ಬಂಗಳೂ ಇಷ್ಟೊಂದು ಮಾರಾಟವಾಗಿರಲಿಲ್ಲ.



‘ಈ ಅನುಪಮ ಸೌಂದರ್ಯದ ಗುಟ್ಟೇನು?’ ಎಂದು ಕೇಳಿದರೆ ಜೆ ಲೋ ಕೈ ತೋರಿಸುವುದು ಗಂಡ ಮಾರ್ಕ್ ಆ್ಯಂಟನಿ ಕಡೆಗೆ. ‘ಹಾಗೆ ನೋಡಿದರೆ 23ರ ಹರೆಯದಲ್ಲೇ ನನ್ನ ತಲೆಯಲ್ಲಿ ಬಿಳಿಕೂದಲು ಕಾಣಿಸಿದ್ದವು. ಸಿನಿಮಾಕ್ಕೆ ಬಂದ ಆರಂಭದಲ್ಲೇ ವಿಪರೀತ ಟೆನ್ಶನ್ ಮಾಡಿಕೊಂಡಿದ್ದೆ. ಆದರೆ ನನ್ನ ಗೆಳೆಯರು, ಗಂಡಂದಿರು ನನ್ನ ಚಿಂತೆಯನ್ನೆಲ್ಲ ದೂರ ಮಾಡಿದರು’ ಎಂದಾಕೆ ನಕ್ಕಿದ್ದಾಳೆ! ಮಾರ್ಕ್ ಆಕೆಯ ಐದನೆಯ ಗಂಡ. ಮೊದಲ ಮದುವೆಯಾಗುವುದಕ್ಕೆ ಮುನ್ನವೇ 15ರ ಹರೆಯದಲ್ಲೇ ಡೇವಿಡ್ ಕ್ರೂಜ್ ಜತೆ ಡೇಟಿಂಗ್ ಶುರು ಮಾಡಿದ್ದ ಆಕೆ, ‘ಇವತ್ತಿಗೂ ಆತ ನನ್ನ ಅತ್ಯುತ್ತಮ ಗೆಳೆಯ; ಅವನಷ್ಟು ನನ್ನನ್ನು ಅರ್ಥ ಮಾಡಿಕೊಂಡ ಗಂಡಸು ಬೇರೊಬ್ಬರಿಲ್ಲ’ ಎಂದು ನಿರ್ಭಿಡೆಯಿಂದ ಹೇಳುತ್ತಾಳೆ.

ಜೆ ಲೋ ಅಭಿಮಾನಿಗಳಿಗೆ ಇನ್ನೂ ಒಂದು ಸಿಹಿ ಸುದ್ದಿಯಿದೆ. ಆಕೆಯ ಹೊಸ ಆಲ್ಬಂ ‘ಲವ್?’ ಸಿದ್ಧವಾಗಿದ್ದು, ಮೇ ಮೊದಲ ವಾರದಲ್ಲಿ ಬಿಡುಗಡೆಯಾಗಲಿದೆಯಂತೆ.




## ಮದುಮಗ ಜಹೀರ್

‘ವಿಶ್ವಕಪ್ ಕೂಡಾ ಗೆದ್ದಾಯಿತು. ಈ ವರ್ಷ ಮಗನಿಗೆ ಮದುವೆ ಮಾಡಲೇಬೇಕು’ ಎಂದು ಜಹೀರ್ ಖಾನ್‌ನ ಅಪ್ಪ-ಅಮ್ಮ ಬಹಿರಂಗವಾಗಿಯೇ ಘೋಷಿಸಿದ್ದಾರೆ. ಜಗತ್ತಿನ ಅತ್ಯುತ್ತಮ ಮಧ್ಯಮ ವೇಗದ ಬೌಲರ್ ಎಂದು ಈಗ ಕರೆಸಿಕೊಳ್ಳುತ್ತಿರುವ ಕ್ರಿಕೆಟಿಗ ಜಹೀರ್, ಕೂಡಾ ಮದುಮಗನ ಕಳೆಯಲ್ಲೇ ಕಂಗೊಳಿಸುತ್ತಿದ್ದಾನೆ. ವಿಶ್ವಕಪ್‌ನಲ್ಲಿ ಅತ್ಯಧಿಕ ವಿಕೆಟ್ ಕಬಳಿಸಿದ ಕೀರ್ತಿಯೂ ಈಗ ಆತನ ಬೆನ್ನಿಗಿದೆ. ಎಲ್ಲವೂ ಊಹೆಯಂತೆ ನಡೆದರೆ, ಆತನ ಮಾಜಿ ಲವರ್ ಇಷಾ ಶರ್ವಾನಿ ಮಡದಿಯೂ ಆಗಿ ಬರಲಿದ್ದಾಳೆ.

ಎಡಗೈಯಲ್ಲಿ ಬೌಲಿಂಗ್ ಮಾಡುವ, ಬಲಗೈಯಲ್ಲಿ ಬ್ಯಾಟ್ ಬೀಸುವ ಮಹಾರಾಷ್ಟ್ರ ಸಂಜಾತ ಜಹೀರ್‌ಗೆ (ಬರ್ತ್‌ಡೇ 7-10-78) ಮದುವೆ ವಯಸ್ಸಾಗಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ಇಷಾಳನ್ನು ಆತ ಭೇಟಿ ಮಾಡಿದ್ದೂ ವಿಶಿಷ್ಟ ಕ್ರಿಕೆಟ್ ಸಂದರ್ಭದಲ್ಲಿ. 2005ರಲ್ಲಿ ಆಸ್ಟ್ರೇಲಿಯಾ ತಂಡ ಭಾರತ ಪ್ರವಾಸ ಮುಗಿಸಿ ವಾಪಸಾಗುವ ಮುನ್ನ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಇಷಾ ಡ್ಯಾನ್ಸ್ ಮಾಡಿದ್ದಳು. ಅಲ್ಲೇ ಕುಳಿತಿದ್ದ ಜಹೀರ್ ಆಕೆಯ ಹೆಜ್ಜೆಗಳಿಗೆ ಬೌಲ್ಡ್ ಆಗಿದ್ದ. ಎರಡು ವರ್ಷಗಳ ಕಾಲ ಇಬ್ಬರೂ ಒಟ್ಟಿಗೇ ತಿರುಗಾಡಿದರು. ಆ ಬಳಿಕ ಅದೇನಾಯ್ತೊ ಗೊತ್ತಿಲ್ಲ, ಇಬ್ಬರೂ ಬೇರೆಯಾದರು. ಬೇರೆಯಾದ ಬಳಿಕ ಇಬ್ಬರೂ ಹೊಸ ಗೆಳೆಯ- ಗೆಳತಿಯರನ್ನು ನೆಚ್ಚಿಕೊಳ್ಳಲಿಲ್ಲ ಎನ್ನುವುದು ವಿಶೇಷ. 2010ರಿಂದ ಮತ್ತೆ ಜತೆಗೂಡಿರುವ ಈ ಇಬ್ಬರನ್ನೂ ಮದುವೆ ಕ್ಲಬ್‌ಗೆ ಸೇರಿಸಲು ಇಬ್ಬರ ಸ್ನೇಹಿತರೂ ಯತ್ನಿಸುತ್ತಿದ್ದಾರಂತೆ.

ಜಹೀರ್ ಕ್ರಿಕೆಟ್ ಜೀವನ ಉದ್ದಕ್ಕೂ ಹೂವಿನ ಹಾಸಿಗೆ ಆಗಿರಲಿಲ್ಲ. 2000ದಲ್ಲಿ ಟೆಸ್ಟ್ ತಂಡಕ್ಕೆ ಪ್ರವೇಶ ಪಡೆದ ಜಹೀರ್ ಭಾರತದ ಆರಂಭಿಕ ಬೌಲರ್ ಆಗಿ ಯಶಸ್ವಿಯಾದರೂ 2003-04 ರಲ್ಲಿ ಗಾಯಗೊಂಡು ತಂಡದಿಂದ ಹೊರಬಿದ್ದಿದ್ದ. 2005ರಲ್ಲಿ ಆತನನ್ನು ಮತ್ತೆ ಡ್ರಾಪ್ ಮಾಡಲಾಯಿತು. ಆದರೆ ದೇಶೀಯ ಕ್ರಿಕೆಟ್‌ನಲ್ಲಿ ಛಲ ಬಿಡದ ಸಾಧನೆ ಮಾಡಿದ ಜಹೀರ್ ಈಗ ವಿಶ್ವಕಪ್ ವಿಜೇತ ತಂಡದ ಕಣ್ಮಣಿ ಬೌಲರ್.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65